पावर ग्रिड कॉर्पोरेशन ऑफ इंडिया लिमिटेड
(भारत सरकार का उद्यम)
POWER GRID CORPORATION OF INDIA LIMITED
(A Government of India Enterprise)

**Registered Post with Acknowledgement Due**

Ref: SR-II: RTI: F-1101:2020/ 2397 Date:24th July, 2020

To

Shri Guru Prasad.P., Advocate,
JURIS 360,
#83, 6th Cross, Malleswaram,
**Bangalore 560 003.**

**Sir,**

**Sub: Information sought under RTI Act, 2005 – reg.**

This has reference to your application dated 24/06/2020 under RTI Act, 2005 received at this office on 26/06/2020. Query wise information sought in the above application is furnished below:

a) Compensations were disbursed as per orders passed by Dy. Commissioner / Chikkaballapur. Compensation formula not available with POWERGRID. Copy of DC/Chikkaballapur enclosed herewith (Anneuxre-1)
b) The question is very generic and details sought are voluminous in nature. Information can be given to specific queries.
c) List of villages: Hunisenahalli, Melya, Huchodanahalli, Jarabandanahalli, Konapura, Nasakuntenahalli, Bychapura, Badimaluru, Huduguru, Sagana halli, Kaduburu, Siddenahalli, Jakkanahalli, Gangasandra, Beeramangala, Rayarekalahalli, Dwaraganahalli, Hanumanehalli, Uchalagollahalli, Kadiridevarahalli, Varavani, Chinnanaganahalli, Chilenahalli, Neralahalli, Halehalli, Guyyalahalli, Marimekala halli,

As per section 19 of the Right to Information Act 2005, if required, you may file an appeal to the First Appellate Authority of the organisation within 30 days of the issue of this order. The address of the First Appellate Authority is given below:

Shri S.Ravi, Executive Director (SRTS-II)
Power Grid Corporation of India Ltd.,
Singanayakanahalli, Yelahanka Hobli,
Bangalore 560 064.
e-mail : sr2edo@powergrid.co.in
Tel.No.: 080-23093701

Thanking you,

Yours faithfully,

(V.RAJESH)
Sr.General Manager & CPIO
e-mail id: sr2cpio@powergrid.co.in
Tel.No.: 080-23093711

Encl.: As above

Copy to: ED(SRTS-II), Appellate Authority, POWERGRID, SRTS-II, Bangalore - for kind information

दक्षिणी क्षेत्र पारेषण प्रणाली - II क्षेत्रीय मुख्यालय, आर.टी.ओ. ड्राइविंग टेस्ट ट्रैक के पास सिंहनायकनहल्ली, येलहंका होब्ली, बेंगलूरु - 560 064. दूरभाष : 080-23093700
Southern Region Transmission System - II RHQ., Near RTO Driving Test Track, Singanayakanahalli, Yelahanka Hobli, Bengaluru - 560 064. Phone : 080-23093700
केन्द्रीय कार्यालय : "सौदामिनी", प्लाट नं.: 2, सेक्टर–29, गुरुग्राम–122001, (हरियाणा), दूरभाष 0124-2571700-719
**Corporate Office :** "Saudamini", Plot No. 2, Sector-29, Gurugram-122001, (Haryana) Tel. : 0124-2571700-719
पंजीकृत कार्यालय : बी -9, कुतुब इंस्टीट्यूशनल एरिया, कटवारिया सराय, नई दिल्ली – 110 016 दूरभाष : 011-26560112, 26560121, 26564812, 26564892, सीआईएन : L40101DL1989GOI038121
**Registered Office :** B-9, Qutab Institutional Area, Katwaria Sarai, New Delhi-110 016. Tel : 011-26560112, 26560121, 26564812, 26564892, CIN : L40101DL1989GOI038121
**Website :** www.powergridindia.com

Annexure - 1

**ಪವರ್‌ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಇವರ ವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನಲ್ಲಿ ಮಾಡಲಿರುವ ವಿವಿದ 400 ಕೆ.ವಿ, ವಿದ್ಯುತ್ ಪ್ರಸರಣ ಮಾರ್ಗಗಳ ಕಾಮಗಾರಿ ಕೆಲಸ ಮಾಡುವ ಸಂಬಂಧ ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಕಛೇರಿ ಆದೇಶ.**

**ಸಂಖ್ಯೆ.ಎಲ್‌ಎಕ್ಯೂಸಿ.ಆರ್:24/2017-18** **ದಿನಾಂಕ: 26/09/2018**

**ಪೀಠಿಕೆ**

01. ಪವರ್ ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಇವರು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ಸೋಲಾರ್ ಸ್ಥಾವರಗಳಿಂದ ಉತ್ಪಾದಿಸುತ್ತಿರುವ ವಿದ್ಯುತ್‌ಚಕ್ತಿಯನ್ನು 400 ಕೆವಿ ಡಬಲ್ ಸರ್ಕಿಟ್ ಮೂಲಕ ಬೇರೆ ಕಡೆಗೆ ಈ ಕೆಳಕಾಣಿಸಿದ ಪ್ರಸರಣ ಮಾರ್ಗಗಳನ್ನು ನಿರ್ಮಿಸಲು ಉದ್ದೇಶಿಸಿ ದಿನಾಂಕ: 22.02.2018, 01.08.2018, 15.05.2018, ಮತ್ತು 08.08.2018 ರ ಪತ್ರದಲ್ಲಿ ಸಂಬಂಧಪಟ್ಟ ಜಮೀನಿನ ಭೂಮಾಲೀಕರಿಗೆ ಪರಿಹಾರವನ್ನು ನಿಗದಿಪಡಿಸಿಕೊಡುವಂತೆ ಕೋರಿರುತ್ತಾರೆ. ಹಾಗೂ ದಿನಾಂಕ 25.09.2018 ರಂದು ಗೌರಿಬಿದನೂರು ತಾಲ್ಲೂಕಿನಲ್ಲಿ ಮಾನ್ಯ ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರು ಭೂ ಪರಿಹಾರವನ್ನು ನಿಗದಿಪಡಿಸಲು ರೈತರು ಹಾಗೂ ಪವರ್‌ಗ್ರೀಡ್ ಅಧಿಕಾರಿಗಳ ಸಭೆಯನ್ನು ನಡೆಸಿರುತ್ತಾರೆ.

ಅ) ಪಾವಗಡ – ದೇವನಹಳ್ಳಿ 400ಕೆವಿ ಡಬಲ್ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

02. ಸದರಿ ಕಂಪನಿಯವರು ದಿನಾಂಕ: 08.08.2018 ರಂದು ಮನವಿ ಸಲ್ಲಿಸಿ ಟವರ್‌ಗಳ ಅಡಿಪಾಯದ ವಿಸ್ತೀರ್ಣದ ಬಗ್ಗೆ, ಕಾರಿಡಾರ್‌ನ ಅಗಲದ ಬಗ್ಗೆ ಹಾಗೂ 400 ಕೆವಿ ಡಬಲ್ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ ಹಾದುಹೋಗುವ ತಾಲ್ಲೂಕು ಮತ್ತು ಹತ್ತಿರದ ಗ್ರಾಮಗಳ ವಿವರಗಳ ಮಾಹಿತಿಯನ್ನು ಈ ಕೆಳಕಾಣಿಸಿದಂತೆ ಸಲ್ಲಿಸಿರುತ್ತಾರೆ.

ಅ) ಪಾವಗಡ – ದೇವನಹಳ್ಳಿ 400ಕೆವಿ ಡಬಲ್ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

| ಕ್ರ.ಸಂ | ತಾಲ್ಲೂಕು | ಗ್ರಾಮ |
|---|---|---|
| 01. | ಗೌರಿಬಿದನೂರು | ಮೇಳ್ಯ, ವರವಣಿ, ಹನುಮನಹಳ್ಳಿ, ಹಳೇಹಳ್ಳಿ, ನೆರ್ಲಹಳ್ಳಿ, ಉಚ್ಚೋದನಹಳ್ಳಿ, ಜರಬಂಡನಹಳ್ಳಿ, ಕೋನಾಪುರ, ನಶಿಕುಂಟಹಳ್ಳಿ, ಬೈಚಾಪುರ, ಬಾದಿಮರಳೂರು, ರಾಮಚಂದ್ರಪುರ, ಹುದುಗೂರು, ಕಲ್ಲುಡಿ, ಪುಟ್ಟಪುರ್ಲಹಳ್ಳಿ, ಸಿದ್ದೇನಹಳ್ಳಿ, ಸಾಗನಹಳ್ಳಿ, ಕಡಬೂರ, ಬುಡುಗೇನಹಳ್ಳಿ, ಗಂಗಾಸಂದ್ರ, ಜಕೇನಹಳ್ಳಿ, ಗುವ್ವಲಹಳ್ಳಿ, ಹನುಮನಹಳ್ಳಿ, ವರವಣಿ, ಚೀಗಟಗೆರೆ, ಭೀರಮಂಗಳ, ರಾಯರಾಕನಹಳ್ಳಿ, ಗುಯಲಹಳ್ಳಿ, ಚನ್ನಬೈರನಹಳ್ಳಿ, ದ್ವಾರಗಾನಹಳ್ಳಿ, ಕೋಡಿಗಾನಹಳ್ಳಿ, ಚರಕಮಿಟ್ಟೇನಹಳ್ಳಿ, ಹುಚ್ಚಲಗೊಲ್ಲಹಳ್ಳಿ, ಕದಿರದೇವರಹಳ್ಳಿ, ಬೆಳತೂರ್, ಚಿನ್ನಗೇನಹಳ್ಳಿ, ಉಪ್ಪಾರಹಳ್ಳಿ, ಚೀಲೇನಹಳ್ಳಿ, ಶಾಂಪುರ, ತಿಮ್ಮನಹಳ್ಳಿ, ಗುಯ್ಯಲಹಳ್ಳಿ, ಮರಿಮಾಕಲಹಳ್ಳಿ, ಬುಡುಗತಿಮ್ಮನಹಳ್ಳಿ, ಹಾಗೂ ಇತರೆ ಗ್ರಾಮಗಳು |

03. ದಿನಾಂಕ: 15.10.2015 ರಂದು ಮಾನ್ಯ ಭಾರತ ಸರ್ಕಾರದ ಇಂಧನ ಸಚಿವಾಲಯವು ನೀಡಿರುವ ಮಾರ್ಗಸೂಚಿಯನ್ವಯ, ಸಂಬಂಧಪಟ್ಟ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳು ಸದರಿ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿಲಾಗಿದೆ. ಹಾಗೆಯೇ ಟವರ್ ಜಾಗಕ್ಕೆ ಮಾರ್ಗಸೂಚಿ ದರದ ಮೇಲೆ ಶೇಖಡ 85% ರಷ್ಟು ಮತ್ತು ಕಾರಿಡಾರ್ ಜಾಗಕ್ಕೆ ಮಾರ್ಗಸೂಚಿ ದರದ ಮೇಲೆ ಶೇಖಡ 15% ರಷ್ಟು ಭೂ ಪರಿಹಾರವನ್ನು ಪಾವತಿ ಮಾಡಬೇಕೆಂದು ಸಹ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಅದೇ ರೀತಿ ಕೇಂದ್ರ ಸರ್ಕಾರದ ಸಭಾ ನಡಾವಳಿಯಲ್ಲಿ ಕರ್ನಾಟಕ ಪ್ರತಿನಿಧಿಗಳ ಹೇಳಿಕೆ ಮತ್ತು ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಪತ್ರ ಸಂಖ್ಯೆ ಇ.ಎನ್ 2ಪಿಎಸ್‌ಸಿ 2015 ದಿನಾಂಕ:

29/08/2015 ಕ.ವಿ.ಪ್ರ.ನಿ.ನಿ ಆದೇಶ ದಿನಾಂಕ: 07/09/2015 ಮತ್ತು ಇಂದನ ಇಲಾಖೆ ಇತ್ತೀಚೆಗೆ ನೀಡಿರುವ ಸ್ಪಷ್ಟೀಕರಣವನ್ನು ಕೂಡ ಗಣನೆಗೆ ತೆಗೆದುಕೊಳಬೇಕಾಗಿರುತ್ತದೆ.

04. ಮುಂದುವರೆದು ದಿನಾಂಕ 25/09/2018 ರಂದು ಮಾನ್ಯ ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರೈತರು ಪಾಲ್ಗೊಂಡಿರುತ್ತಾರೆ. ಈ ಸಭೆಯಲ್ಲಿ ರೈತರು ಮಾತನಾಡಿ ತಮ್ಮ ಜಮೀನಿಗೆ ಶಾಶ್ವತ ಪರಿಹಾರ ನೀಡುವಂತೆ ಆಗ್ರಹಿಸಿರುತ್ತಾರೆ. ನಂತರ ಪವರ್ ಗ್ರೀಡ್ ಅಧಿಕಾರಿಗಳು ಮಾತನಾಡಿ ತುಮಕೂರು ಜಿಲ್ಲೆ ಮತ್ತು ಅನಂತಪುರಂ ಜಿಲ್ಲೆಗಳಲ್ಲಿ ಇದೇ 400ಕೆವಿ ಡಬಲ್ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪರಿಹಾರ ನಿಗಧಿಪಡಿಸಿದ್ದು, ಅದೇ ರೀತಿ ಪರಿಹಾರವನ್ನು ಈ ಜಿಲ್ಲೆಯಲ್ಲಿಯೂ ನಿಗಧಿಪಡಿಸಲು ಕೋರಿರುತ್ತಾರೆ.

ಈ ಮೇಲ್ಕಂಡ ವಿವರಿಸಿದ ಅಂಶಗಳ ಮೇರೆಗೆ ಹಾಗೂ ಪವರ್‌ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಇವರ ಮನವಿಯ ಮೇರೆಗೆ ಹಾಗೂ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ಆದೇಶ ನಂ:ಎಂಎಜಿ(1)ಸಿಆರ್:339/2017-18 ದಿನಾಂಕ 03/11/2017 ಮತ್ತು ಜಿಲ್ಲಾಧಿಕಾರಿಗಳು, ಅನಂತಪುರಂ ಜಿಲ್ಲೆ ರವರ ಆದೇಶ ನಂ:Rc.No,GI/4173/2016, ದಿನಾಂಕ 09/05/2017 ರ ಆದೇಶಗಳನ್ನು ಪರಿಶೀಲಿಸಿ, ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆ .

## ಆದೇಶ

ವಿದ್ಯುಚ್ಛಕ್ತಿ ಕಾಯ್ದೆ-2003, ಟೆಲಿಗ್ರಾಫ್ ಕಾಯ್ದೆ-1885 ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ ಅಳವಡಿಕೆಯ ಅವಶ್ಯಕತೆಯನ್ನು ಪರಿಗಣಿಸಿ ಟೆಲಿಗ್ರಾಫ್ ಕಾಯ್ದೆ-1885 ರ ಸೆಕ್ಷನ್-16 ರಂತೆ ಈ ಕೆಳಕಾಣಿಸಿದಂತೆ ಪರಿಹಾರವನ್ನು ನಿಗಧಿಪಡಿಸಿ ಆದೇಶಿಸಲಾಗಿದೆ.

01. ಪಾವಗಡ-ದೇವನಹಳ್ಳಿ 400ಕೆವಿ ಡಬಲ್ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

| ಟವರ ವಿಧ | ನಿಗದಿಪಡಿಸಲಾದ ಪರಿಹಾರ ಮೊತ್ತ ರೂ.ಲಕ್ಷಗಳಲ್ಲಿ |
|---|---|
| **"A"** ವಿಧ | 2.25 |
| **"B"** ವಿಧ | 2.50 |
| **"C"** ವಿಧ | 3.00. |
| **"D"** ವಿಧ | 4.00 |

ಪವರ್ ಲೈನ್ ನಿರ್ಮಾಣದ ಹಾದಿಯಲ್ಲಿ ಬರುವ ಮರಗಳಿಗೆ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ನು ಆಧರಿಸಿ ಮತ್ತು ಆಯಾ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿಗಧಿಪಡಿಸುವ ದರದಂತೆ ಪರಿಹಾರ ನೀಡಲು ತೀರ್ಮಾನಿಸಲಾಯಿತು.

ಭೂ ಮಾಲೀಕರುಗಳಿಗೆ ಹಾನಿಗೊಳಗಾಗುವ ಮರಗಳು ಮತ್ತು ಬೆಳೆಗಳಿಗೆ ನೀಡುವ ಪರಿಹಾರದ ಜೊತೆ, ಪವರ್ ಲೈನ್ ಎಳೆಯುವ ಸಮಯದಲ್ಲಿ ಜಮೀನಿಗೆ ಆಗುವ ಹಾನಿ ಬಗ್ಗೆ ಪ್ರತಿ ಎಕರೆ ಜಮೀನಿಗೆ ಅಧಿಕ ಪರಿಹಾರವಾಗಿ ರೂ 2.00 ಲಕ್ಷಗಳನ್ನು (ಎರಡು ಲಕ್ಷಗಳು ಮಾತ್ರ) ಪಾವತಿಸಲು ಆದೇಶಿಸಿದೆ. ಪವರ್‌ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಕಂಪನಿಯವರು ಮೇಲೆ ವಿವರಿಸಿದ ಎಲ್ಲಾ ವಿದ್ಯುತ್ ಮಾರ್ಗಗಳ ಕಾರಿಡಾರ್‌ನ ಅಗಲ 46 ಮೀಟರ್ ಇರುವುದಾಗಿ ತಿಳಿಸಿದ್ದು, ಈ ಆಧಾರದ ಮೇಲೆ ಪರಿಹಾರವನ್ನು ಪಾವತಿಸಲು ಸೂಚಿಸಲಾಗಿದೆ.

**ಕೊಳವೆಬಾವಿಗಳಿಗೆ ಪರಿಹಾರ** :- ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ಹಾದು ಹೋಗುವ ಜಮೀನಿನಲ್ಲಿ ಬರುವ ಬೋರವೆಲ್/ಕೊಳವೆ ಬಾವಿಗಳಿಗೆ ಹಾನಿಯಾದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯಿತ್ ರಾಜ್ ಇಂಜಿನಿಯರಿಂಗ್ ವಿಭಾಗ, ಗೌರಿಬಿದನೂರು ವಿಭಾಗ ಇವರ ಅಂದಾಜಿನಂತೆ ಸೂಕ್ತ ಪರಿಹಾರ ನೀಡಲು ಪವರ್‌ಗ್ರಿಡ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

01. ಪವರ್‌ಗ್ರೀಡ್ ರವರು ಪವರ್ ಲೈನ್ ಅಳವಡಿಸಿರುವ ಕಾರಿಡಾರ್ ಮಧ್ಯಭಾಗದಿಂದ ಎರಡು ಕಡೆ ನಿಗದಿತ ಅಳತೆಗೆ ಬೌಂಡರಿ ನಿಗದಿಪಡಿಸಿ ಗುರುತು ಮಾಡಲು ಸೂಚಿಸಲಾಗಿದೆ.

02. ಪವರ್ ಲೈನಿಗಾಗಿ ನಿರ್ಮಾಣ ಮಾಡುವ ಟವರ್ ಮತ್ತು ಪವರ್ ಲೈನ್ ಹಾದು ಹೋಗುವ ಕಾರಿಡಾರಿನ ಜಮೀನಿನ ಮಾಲೀಕರೊಂದಿಗೆ ಜಮೀನಿನಲ್ಲಿಯೇ ಪವರ್‌ಗ್ರೀಡ್‌ರವರು ಭಾವಚಿತ್ರಗಳನ್ನು ತೆಗೆಸಿಕೊಳ್ಳತಕ್ಕದ್ದು.

<u>ಭೂ ಮಾಲೀಕರುಗಳಿಗೆ ಈ ಕೆಳಕಂಡ ಎರಡು ಹಂತಗಳಲ್ಲಿ ಪರಿಹಾರಧನವನ್ನು ವಿತರಿಸಲು ಆದೇಶಿಸಲಾಗಿದೆ.</u>

<u>ಹಂತ–1</u> ಪ್ರಥಮ ಹಂತದಲ್ಲಿ ಪವರ್ ಲೈನ್ ಟವರ್ ನಿರ್ಮಾಣ ಮಾಡುವ ಸ್ಥಳಕ್ಕೆ ಸಂಬಂಧಿಸಿದ ಜಮೀನಿಗೆ ಟವರ್ ಅಡಿಪಾಯದ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡ ನಂತರ ಶೇಖಡಾ 50% ರಷ್ಟು ಮತ್ತು ಟವರ್ ನಿರ್ಮಾಣ ಪೂರ್ಣಗೊಂಡ ನಂತರ ಶೇಕಡಾ 50% ರಷ್ಟು ಪರಿಹಾರ ನೀಡತಕ್ಕದ್ದು. ಭೂ ಪರಿಹಾರವನ್ನು ಸಂಬಂಧಪಟ್ಟ ರೈತರಿಗೆ ಆರ್‌ಟಿಜಿಎಸ್ ಮುಖಾಂತರ ವರ್ಗಾವಣೆ ಮಾಡಲು ತಿಳಿಸಿಲಾಯಿತು.

<u>ಹಂತ–2</u> ಎರಡನೇ ಹಂತದಲ್ಲಿ ಪವರ್ ಲೈನ್ ಎಳೆದ ನಂತರ ಪವರ್ ಲೈನ್ ಹಾದು ಹೋಗುವ ಜಮೀನಿನಲ್ಲಿನ ಬೆಳೆಗಳಿಗೆ ಬೆಳೆ ನಷ್ಟ ಪರಿಹಾರ, ಮರ ನಷ್ಟ ಪರಿಹಾರ ಮತ್ತು ಕಾರಿಡಾರ್‌ಗಳಿಗೆ ಶೇಕಡಾ 100% ರಷ್ಟು ಪರಿಹಾರವನ್ನು ಪಾವತಿಸತಕ್ಕದ್ದು.

ಪರಿಹಾರ ಮೊತ್ತದ ಬಗ್ಗೆ ಮತ್ತು ಪರಿಹಾರ ಹಂಚಿಕೊಳ್ಳುವ ಬಗ್ಗೆ ಯಾವುದೇ ವ್ಯಾಜ್ಯಗಳಿದ್ದಲ್ಲಿ ಸದರಿ ವ್ಯಾಜ್ಯಗಳನ್ನು ಭಾರತೀಯ ಟೆಲಿಗ್ರಾಫ್ ಕಾಯ್ದೆ 1885 ರ ಸೆಕ್ಷನ್ 16(3) ಮತ್ತು 16(4) ರ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

(ಪಿ ಅನಿರುದ್ಧ್ ಶ್ರವಣ್,)
ಜಿಲ್ಲಾಧಿಕಾರಿಗಳು,
ಚಿಕ್ಕಬಳ್ಳಾಪುರ ಜಿಲ್ಲೆ.

<u>ಪ್ರತಿಯನ್ನು :–</u>

01. ಪೋಲಿಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ಮತ್ತು ಪವರ್‌ಗ್ರಿಡ್ ಅಧಿಕಾರಿಗಳು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಉಂಟಾಗುವ ಅಡಚಣೆಗಳಿಗೆ ಅವಶ್ಯಕವಿದ್ದಲ್ಲಿ ಸೂಕ್ತ ರಕ್ಷಣೆ ಒದಗಿಸಲು ಮತ್ತು ಕ್ರಮಕೈಗೊಳ್ಳಲು.
02. ಡೆಪ್ಯೂಟಿ ಜನರಲ್ ಮೇನೇಜರ್, STA to ED ಪವರ್‌ಗ್ರಿಡ್ ಬೆಂಗಳೂರು ಇವರ ಮಾಹಿತಿಗಾಗಿ.
03. ಉಪವಿಭಾಗಾಧಿಕಾರಿ, ಚಿಕ್ಕಬಳ್ಳಾಪುರ ಉಪವಿಭಾಗ ಇವರ ಮಾಹಿತಿಗಾಗಿ.
04. ತಹಶೀಲ್ದಾರ್ ಗೌರಿಬಿದನೂರು ತಾಲ್ಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
05. ಕಛೇರಿ ಪ್ರತಿ.